1	2	3	4
17.	Raichur	7234	36101
18.	Shimoga	11127	47676
19.	Tumkur	17615	92291
20.	Kolar	13726	73671
21.	Koppal	5427	24989
22.	Mandya	6785	28374
23.	Mysore	6123	30521
24.	Raichur	6054	22152
25.	Shimoga	6338	25661
26.	Tumkur	3451	23644
27.	Udupi	5852	37532
	Total	**298218**	**1722190**

ಧಾರವಾಡ ನಗರದಲ್ಲಿ ಕಾಯಕ ನಗರ ನಿರ್ಮಾಣ ಮಾಡುವ ಯೋಜನೆ

2273 (2939) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ನಗರದಲ್ಲಿ ಕೈ ಕೆಲಸ ಮಾಡುವ ಕಸುಬುದಾರರಿಗೆಂದು ಕಾಯಕ ನಗರ ನಿರ್ಮಾಣ ಮಾಡುವ ಯೋಜನೆಗೆ ಸರ್ಕಾರ ಒಪ್ಪಿಗೆ ನೀಡಿದ್ದು ಯಾವಾಗ;

ಆ) ಇದಕ್ಕಾಗಿ ಮೀಸಲಿಟ್ಟಿದ್ದ ಹಣ ಎಷ್ಟು; ಎಷ್ಟು ವೆಚ್ಚ ಮಾಡಲಾಗಿದೆ;

ಇ) ಕಾಯಕನಗರದಲ್ಲಿ ವಸತಿ ಕಾರ್ಯಾಗಾರದ ಫಲಾನುಭವಿಗಳ ಆಯ್ಕೆಯ ವಿವರವನ್ನು ನೀಡುವುದು;

ಈ) ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ಧಾರವಾಡ ಜಿಲ್ಲೆಯ ನರೇಂದ್ರ ಗ್ರಾಮದಲ್ಲಿ ಕುಶಲಕರ್ಮಿಗಳಿಗೆ ಕಾಯಕನಗರ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಐ 56 ಸಪ್ರಕ್ಕೆ 99, ದಿ: 30.3.2000ರಲ್ಲಿ ಒಪ್ಪಿಗೆ ನೀಡಲಾಗಿದೆ.

ಆ) ಧಾರವಾಡ ಕಾಯಕನಗರ ಯೋಜನೆಗಾಗಿ ಇದುವರೆವಿಗೆ ರೂ. 54.88 ಲಕ್ಷಗಳನ್ನು ವೆಚ್ಚಮಾಡಲಾಗಿದೆ. ಒಟ್ಟು ಕಾಯಕನಗರ ಯೋಜನೆಗಳಿಗಾಗಿ ಈ ಸಾಲಿನ ಆಯವ್ಯಯದಲ್ಲಿ ರೂ. 90 ಲಕ್ಷ ಅನುದಾನವನ್ನು ಮೀಸಲಿಡಲಾಗಿದ್ದು ಈಗಾಗಲೇ ರೂ. 19.50 ಲಕ್ಷವನ್ನು ಧಾರವಾಡ ಕಾಯಕನಗರ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಸಿಐ 99 ಸಪ್ರಕ್ಕೆ 2003, ದಿನಾಂಕ: 9.7.2003ರಲ್ಲಿ ಬಿಡುಗಡೆಗೊಳಿಸಲಾಗಿದೆ.

ಇ) 2000–01ನೇ ಸಾಲಿನ ಟೆಕ್ಸಾಕ್ ವರದಿಯನ್ವಯ ಈ ಯೋಜನೆಯಡಿ ಒಟ್ಟು 678 ಫಲಾನುಭವಿಗಳನ್ನು ಗುರುತಿಸಲಾಗಿದ್ದು ನಿವೇಶನರಹಿತ ಫಲಾನುಭವಿಗಳಿಗೆ ಕಾಯಕ ನಗರ

ಸೌಲಭ್ಯವನ್ನು ಒದಗಿಸಬೇಕೆಂದು ನಿರ್ಧರಿಸಲಾಗಿದೆ. ಫಲಾನುಭವಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ಯೋಜನೆಗೆ ಇನ್ನೂ ರೂ. 2.05 ಕೋಟಿ ಅನುದಾನದ ಅವಶ್ಯಕತೆ ಇದ್ದು ಅನುದಾನದ ಲಭ್ಯತೆಗನುಗುಣವಾಗಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಅನುಬಂಧ

ಧಾರವಾಡ ಕಾಯಕನಗರ ಯೋಜನೆಯ ಫಲಾನುಭವಿಗಳ ಪಟ್ಟಿ

ಕಸಬುಗಳು	ಒಟ್ಟು	ಪ/ಚಾ	ಪ/ಪಂ	ಅ.ಸಂ.	ಇತರೆ ಹಿಂ.ಪ	ಇತರೆ
1. ಚರ್ಮಗಾರಿಕೆ	187	187	–	–	–	–
2. ಮೆಕ್ಯಾನಿಕ್	210	–	210	–	–	–
3. ಕಮ್ಮಾರಿಕೆ	66	–	–	33	33	–
4. ಡಬ್ಬಿ ತಯಾರಿಕೆ	07	–	–	07	–	–
5. ಟಾರ್ ರೈಡಿಂಗ್	03	–	01	–	02	–
6. ಕುಂಬಾರಿಕೆ	26	–	–	–	26	–
7. ಮಂಡಕ್ಕಿ ಕಸಬು	52	–	–	50	02	–
8. ಬಡಿಗೆ	50	–	–	11	39	–
9. ಹೊಲಿಗೆ/ಸಿದ್ಧ ಉಡುಪು	18	01	01	06	10	–
10. ಸೌದೆ ತಯಾರಿಕೆ	35	31	–	–	04	–
11. ಗೋಲ್ಡ್ ಸ್ಮಿತ್	03	–	–	–	–	03
12. ಜರಿ ನೇಯ್ಗೆ	03	–	–	–	03	–
13. ಸಲೂನ್	01	0	0	0	01	–
14. ದುಪ್ಪಟ ನೇಯ್ಗೆ	02	–	01	0	01	–
15. ಶಾಮಿಯಾನಾ	01	0	0	0	01	–
16. ಕಲ್ಲು ಒಡೆಯುವುದು	01	01	–	–	–	–
17. ಡ್ರೈ ಕ್ಲೀನಿಂಗ್	03	–	–	03	–	–
18. ವಿದ್ಯುತ್ ಉಪಕರಣಗಳ ದುರಸ್ಥಿ	01	–	–	–	01	–
19. ಕೂಲಿ	04	03	–	–	01	–
20. ಪ್ಯಾಡಿ ಕೆಲಸ	01	–	01	–	–	–
21. ಸೈಕಲ್ ರಿಪೇರಿ	01	–	01	–	–	–
22. ಕಿರಾಣಿ ಅಂಗಡಿ	01	–	01	–	–	–
23. ಸೀಮೆ ಎಣ್ಣೆ ವ್ಯಾಪಾರ	02	–	02	–	–	–
	678	**223**	**218**	**110**	**124**	**03**